ಕಾಮಗಾರಿಗಳ ನಿರ್ಮಾಣದ ಗುಣಮಟ್ಟವನ್ನು ಪರೀಕ್ಷಿಸಲು ಸ್ವತಂತ್ರ ಸಲಹೆಗಾರರನ್ನು (independent audit consultant) ನೇಮಿಸಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ

ಈ ಎಲ್ಲಾ ಕಾಮಗಾರಿಗಳಿಗೂ ಉನ್ನತ ದರ್ಜೆಯ specification ಅನ್ನು ನಿರ್ಧರಿಸಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಗುತ್ತಿಗೆದಾರರು ಮಾಡಿರುವ ಕೆಲಸವು ನಿರ್ಧರಿಸಿದ ಗುಣಮಟ್ಟಕ್ಕೆ ಇಲ್ಲದೆ ಇದ್ದುದು ಕಂಡು ಬಂದಲ್ಲಿ ಸದರಿ ಗುತ್ತಿಗೆದಾರರಿಂದಲೇ ಅವರ ವೆಚ್ಚದಲ್ಲಿ ಸರಿಪಡಿಸಲು ಕ್ರಮ ತೆಗೆದುಕೊಂಡಿರುತ್ತದೆ

ಗುತ್ತಿಗೆ ಕರಾರಿನ ಪ್ರಕಾರ, ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ, ಈ ರಸ್ತೆಗಳು ಒಂದು ವರ್ಷದ ಅವಧಿಯವರೆಗೂ ಡಿಫೆಕ್ಟ್ ಲಯಬಿಲಿಟಿ ಪಿರಿಯಡ್ (defect liability period) ಎಂದು ಸೂಚಿಸಲಾಗಿದ್ದು, ಈ ಅವಧಿಯಲ್ಲೂ ಯಾವುದಾದರೂ ದೋಷಗಳು ಕಂಡು ಬಂದಕಲ್ಲಿ, ಗುತ್ತಿಗೆದಾರರು ತಮ್ಮ ವೆಚ್ಚದಲ್ಲೇ ಈ ದೋಷಗಳನ್ನು ಸರಿಪಡಿಸಬೇಕಾಗಿರುತ್ತದೆ

ಕಳಪೆ ಗುಣಮಟ್ಟದಿಂದ ಮೇಲ್ದರ್ಜೆಗೇರಿಸಿದ ಕಾಮಗಾರಿಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆದರೆ ಪುನಃಶ್ಚೇತನ ಅಡಿಯಲ್ಲಿ ಶೆಡ್ಬಾಳ್– ಸಂಕೇಶ್ವರ ರಸ್ತೆ [M-4] ಪ್ಯಾಕೇಜಿನಲ್ಲಿ ಬೆಳಗಾಂ ಜಿಲ್ಲೆಗೆ ಸಂಬಂಧಿಸಿದಂತೆ, ಕಳಪೆ ಕಾಮಗಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ಗುತ್ತಿಗೆದಾರರ ಖರ್ಚಿನಲ್ಲಿಯೇ ಕಾಮಗಾರಿಯನ್ನು ಸರಿಪಡಿಸಲಾಗುತ್ತಿದೆ

ಉ) ಮೇಲಿನಂತೆ ಕ್ರಮ ಕೈಗೊಳ್ಳಲಾಗಿದೆ

301 (29) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಒಟ್ಟು ಸಂಖ್ಯೆ ಎಷ್ಟು ,

ಆ) ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಉಳಿತಾಯ ಮಾಡಿರುವ ಹಣದ ಮೊತ್ತವೆಷ್ಟು,

ಇ) ರಾಜ್ಯದಲ್ಲಿರುವ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ತಾಲ್ಲೂಕು ಒಕ್ಕೂಟದ ಮುಖಾಂತರ ವಿವಿಧ ಬ್ಯಾಂಕುಗಳಿಂದ ಸಾಲ ಮಂಜೂರು ಮಾಡಿಸುವ ಉದ್ದೇಶ ರಾಜ್ಯ ಸರ್ಕಾರಕ್ಕೆ ಇದೆಯೇ,

ಈ) ತಾಲ್ಲೂಕು ಸ್ತ್ರೀಶಕ್ತಿ ಸ್ವಸಹಾಯ ಗುಂಮಗಳ ಒಕ್ಕೂಟದಲ್ಲಿ ಉದ್ದೇಶ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ನಿಯಮಗಳ ರಚನೆ ಮಾಡಿ ತಾಲ್ಲೂಕು ಒಕ್ಕೂಟಗಳನ್ನು ಬಲಪಡಿಸುವ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು, 1,19,246 ಗ್ರಾಮೀಣ ಸ್ತ್ರೀಶಕ್ತಿ ಸ್ವಸಹಾಯ ಗುಂಮಗಳು ಹಾಗು 6,252 ನಗರ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿವೆ

ಆ) ಗ್ರಾಮೀಣ ಮತ್ತು ನಗರ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಒಟ್ಟು ರೂ 426,76 ಕೋಟಿ ಉಳಿತಾಯ ಮಾಡಿರುತ್ತವೆ

ಇ) ಪರಿಶೀಲನಾ ಹಂತದಲ್ಲಿದೆ

ಈ) ತಾಲ್ಲೂಕು ಒಕ್ಕೂಟಗಳನ್ನು ರಚಿಸಿ ಇವುಗಳನ್ನು ಬಲವಡಿಸುವ ನಿಟ್ಟಿನಲ್ಲಿ ಮೊದಲ ಹಂತದಲ್ಲಿ ಕಛೇರಿ ಸ್ಥಾಪನೆ ಪೀರೋಪಕರಣ ಇತ್ಯಾದಿಗಳಿಗೆ ಪ್ರತಿ ತಾಲ್ಲುಕು ಒಕ್ಕೂಟಕ್ಕೆ ರೂ 30,000ರ ಪ್ರಾರಂಭಿಕ ಬಂಡವಾಳವನ್ನು ನೀಡಲಾಗಿದೆ

302 (29) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ 11 ಹಾಗೂ 12ನೇ ಯೋಜನೆಯಲ್ಲಿ ಸಾಲ ಪಡೆದಿರುವ ಹಣವೆಷ್ಟು ,

ಆ) ಆ ಹಣದಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸ ಲಾಗಿದೆಯೇ? (ಜಿಲ್ಲಾವಾರು, ತಾಲ್ಲೂಕುವಾರು ವಿವರಗಳನ್ನು ನೀಡುವುದು),